ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಾದಂತಹ ಅವಶ್ಯಕತೆ ಇದೆ. ಹೆಣ್ಣುಮಕ್ಕಳು, ಗಂಡು ಮಕ್ಕಳು ಎಲ್ಲರೂ ಸೇರಿಯೇ ಅಲ್ಲಿ ಹೋರಾಟ ಮಾಡುತ್ತಿದ್ದಾರೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಕೂಡಲೆ ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಕೈಗಾ ಅಣು ವಿದ್ಯುತ್ ಸ್ಥಾವರ ನೇರವಾಗಿ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತಹ ಯೋಜನೆಯಾಗಿದೆ. ಅಲ್ಲಿ ಧರಣಿ ನಿರತರನ್ನು ಸ್ವತಃ ನಾನೇ ಭೇಟಿ ಮಾಡಿ, ಅವರ ಅಹವಾಲುಗಳನ್ನು ಆಲಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಆಗಮಿಸಿ, ಪ್ರಗತಿ ಪರಿಶೀಲನೆ ನಡೆಸಿದಾಗ, ಕೈಗಾಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಕರೆದು ಚರ್ಚಿಸಲಾಗಿದೆ. ಅವರ ಆರೋಗ್ಯದ ಮೇಲೆ ಆಗುತ್ತಿರುವಂತಹ ತೊಂದರೆ ಮತ್ತು 5 ಕಿ.ಮೀ. ಮತ್ತು ಹೊರಗಿನ ವಲಯದಲ್ಲಿ ಆಗುತ್ತಿರುವ ತೊಂದರೆ, ತೊಡಕುಗಳ ಬಗ್ಗೆ ಗಮನ ಹರಿಸಲಾಗಿದೆ. ಅವರಿಗೆ ಪುನರ್‌ವಸತಿ ಒದಗಿಸುವುದು, ಭೂಮಿ acquisition ಮಾಡಿಕೊಳ್ಳುವುದು, ಅವರಿಗೆ ಪರಿಹಾರ ನೀಡುವುದು ಮುಂತಾದ ಎಲ್ಲಾ ವಿಷಯಗಳ ಬಗ್ಗೆ ನಾವು ಸಮಗ್ರವಾಗಿ ಚರ್ಚೆ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ಪರವಾಗಿ ಅಲ್ಲಿಯ ಜನರ ಬೇಡಿಕೆಗಳನ್ನು ತಿಳಿಸುವಂತಹ ಪ್ರಯತ್ನಗಳನ್ನು ಈಗಾಗಲೇ ನಾವು ಮಾಡಿದ್ದೇವೆ. ಮುಂದೆಯೂ ಸಹ ಆ ಪ್ರಯತ್ನಗಳನ್ನು ನಾವು ಮುಂದುವರೆಸುತ್ತೇವೆ.

5) **ವಿಷಯ : ಫ್ಲೋರೈಡ್ ಅಂಶ ಜಾಸ್ತಿಯಿರುವ ಕುಡಿಯುವ ನೀರಿನ ಬಗ್ಗೆ**

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿದೆ ಮತ್ತು ಫ್ಲೋರೈಡ್ ಅಂಶದಿಂದ ಕೂಡಿದ ನೀರಿನಿಂದ ಆಗಿರುವುದನ್ನು ತೋರಿಸಲು ಇದನ್ನು ತಂದಿದ್ದೇನೆ, ಮಾನ್ಯ ಅಧ್ಯಕ್ಷರೆ, ಇದನ್ನು ನೋಡಿ, ಫ್ಲೋರೈಡ್ ಅಂಶ ಜಾಸ್ತಿಯಾಗಿ ಬೋರ್‌ವೆಲ್‌ಗಳು ಕೆಲಸ ಮಾಡುತ್ತಿಲ್ಲ, ಒಂದು ರೀತಿ ಸೀಸದ ರೀತಿ ಗಟ್ಟಿಯಾಗಿರುತ್ತದೆ ನೋಡಿ.

[ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರಿಗೆ ಫ್ಲೋರೈಡ್ ಅಂಶದಿಂದ ಬೋರ್‌ವೆಲ್ ಗಳಲ್ಲಿ ಉತ್ಪತ್ತಿಯಾದ ವಸ್ತುವನ್ನು ಮಾನ್ಯ ಸದಸ್ಯರು ಕಳುಹಿಸಿಕೊಟ್ಟರು]

ಶ್ರೀ ಸಿ.ಟಿ.ರವಿ :– ಮಾನ್ಯ ಅಧ್ಯಕ್ಷರೆ, ನಮ್ಮಲ್ಲೂ ಇದೇ ರೀತಿಯ ಕುಡಿಯುವ ನೀರಿನ ಸಮಸ್ಯೆ ಇದೆ. ಕಡೂರು ಮತ್ತು ಬಾರ್ಡರ್ ಏರಿಯಾಗಳಲ್ಲೂ ಇದೇ ರೀತಿ ಫ್ಲೋರೈಡ್ ಸಮಸ್ಯೆ ಇದೆ. ಈ ಫ್ಲೋರೈಡ್‌ದು ಸೀರಿಯಸ್ ಸಮಸ್ಯೆಯಾಗಿದೆ.

ಅಧ್ಯಕ್ಷರು :– ಇದು ಎಲ್ಲಾ ಕಡೆ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ನಮ್ಮ ಕ್ಷೇತ್ರದಲ್ಲಿ ಬಹಳ ಕಾಲದಿಂದಲೂ ಈ ಸಮಸ್ಯೆ ಇದ್ದರು, ಇತ್ತೀಚಿಗೆ ಜಾಸ್ತಿಯಾಗಿ ಎಲ್ಲಾ ಬೋರ್‌ವೆಲ್‌ಗಳು ಕೆಲಸ ಮಾಡುತ್ತಿಲ್ಲ, ಬೋರ್‌ವೆಲ್‌ನಿಂದ ಬರುವ ನೀರು ಸ್ಟ್ರಕ್ ಆಗುತ್ತಿದೆ. ಜನರು ನೀರಿಗಾಗಿ ನಮ್ಮಲ್ಲಿ ಬಂದು ಈ ಫ್ಲೋರೈಡ್ ವಾಟರ್‌ನಿಂದಾಗವ ಸಮಸ್ಯೆಯನ್ನು ಹೇಳಿಕೊಳ್ಳುತ್ತಾರೆ. ಬಹುತೇಕ ಬೋರ್‌ವೆಲ್‌ಗಳು ಬತ್ತಿ ಹೋಗುತ್ತಿವೆ. ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಇನ್ನೂ ಸರ್ವೆ ಕಾರ್ಯದಲ್ಲಿಯೇ ಇದೆಯೇ ಹೊರತು ಬೇರೇನೂ ಕೆಲಸ ಆಗಲಿಲ್ಲ, ನಮ್ಮ ಕುಡಿಯುವ ನೀರಿನ ಬವಣೆ ದೂರ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಕುಡಿಯುವ ನೀರಿಗೆ ತೊಂದರೆಯಾದರೆ ಜನರು ಯಾವ ರೀತಿ ಜೀವನ ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಈ ಸಮಸ್ಯೆ ನೀಗಿಸಲು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಸದಸ್ಯರು ಫ್ಲೋರೈಡ್‌ಯುಕ್ತ ನೀರಿನ ಸಮಸ್ಯೆ ಬಗ್ಗೆ ಹೇಳಿದರು, ಬೋರ್‌ವೆಲ್‌ನಲ್ಲಿ ಫ್ಲೋರೈಡ್ ಅಂಶವಿರುವ ನೀರು ಕಂಡು ಬರುತ್ತಿರುವುದು ನಿಜ. ಸರ್ಕಾರ ರಾಜ್ಯದಲ್ಲಿ ಈ ಸಮಸ್ಯೆಯನ್ನು ನೀಗಿಸಲು ಕಾರ್ಯಕ್ರಮ ರೂಪಿಸುವ ನಿಟ್ಟಿನಲ್ಲಿ ಆಲೋಚನೆ ಮಾಡಿ, ಕ್ರಮ ತೆಗೆದುಕೊಳ್ಳುತ್ತಿದೆ. Multi-Village Scheme ಮೂಲಕ surface water source ನಿಂದ ಕುಡಿಯುವ ನೀರನ್ನು ಕೊಡಲು ಆದ್ಯತೆ ಕೊಡುತ್ತಿದ್ದೇವೆ. Multi-Village Scheme ಅಡಿಯಲ್ಲಿ ಈ ಸಮಸ್ಯೆಯನ್ನು ಪರಿಹರಿಸಲು

ಪ್ರಯತ್ನ ಮಾಡಲಾಗುತ್ತಿದೆ. ಇದಕ್ಕೆ ಈಗಾಗಲೇ DPR ಸಿದ್ಧವಾಗಿ ಸರ್ವೆ ಕಾರ್ಯ ನಡೆದಿದ್ದು within time-bound ಎಲ್ಲೆಲ್ಲಿ ನೀರಿನಲ್ಲಿ ಫ್ಲೋರೈಡ್ ಅಂಶ ಇದೆ ಅಲ್ಲಿ ಡಿ–ಫ್ಲೋರೈಡ್ ಯೂನಿಟ್‌ಗಳನ್ನು ಅಳವಡಿಸಲು ಪ್ರಯತ್ನ ಮಾಡಿದ್ದೇವೆ. 300 Multi Village Scheme ಗಳಲ್ಲಿ 100 ಸ್ಕೀಮ್‌ಗಳು ಕಂಪ್ಲೀಟ್ ಆಗಿವೆ. ಉಳಿದ 200 ಸ್ಕೀಮ್‌ಗಳು on-going works ಆಗಿವೆ. ಸರ್ಕಾರ ಇದನ್ನು ಗಂಭೀರವಾದ ವಿಷಯವೆಂದು ಪರಿಗಣಿಸಿ ಆದ್ಯತೆ ಮೇಲೆ ಈ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. ಇದಕ್ಕಾಗಿ ಸುಮಾರು 106 ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ಗೆ ಅಪ್ರೂವಲ್ ಕೊಟ್ಟಿದ್ದೇವೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ, ಈ ಸಮಸ್ಯೆಯನ್ನು ಆದಷ್ಟು ಬೇಗ ನಿವಾರಣೆ ಮಾಡಿಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ.

6. ವಿಷಯ: ಪತ್ರಿಕಾಗೋಷ್ಠಿ ನಡೆಸಿದ ಮುಸ್ಲಿಂ ನಾಯಕರ ಮೇಲೆ ಕ್ರಿಮಿನಲ್ ಕೇಸ್ ಹಾಕಿರುವ ಬಗ್ಗೆ.

ಶ್ರೀ ಯು. ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆಲವು ದಿವಸಗಳ ಹಿಂದೆ ಮುಸ್ಲಿಂ ಅಲ್ಪ ಸಂಖ್ಯಾತರ ಮೇಲೆ ಅಪಪ್ರಚಾರ, ಆರೋಪಗಳೂ ಬಂದ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತ ಮುಖಂಡರು ಒಂದು ಪತ್ರಿಕಾಗೋಷ್ಠಿಯನ್ನು ಮಾಡಿದರು. ಆ ಪತ್ರಿಕಾಗೋಷ್ಠಿ ಮಾಡಿದವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿಕೊಳ್ಳಲಾಗಿದೆ. ಅಪಪ್ರಚಾರಗಳು ಆದಾಗ ಅದನ್ನು ಪತ್ರಿಕಾಗೋಷ್ಠಿಯಲ್ಲಿ ಹೇಳುವ ಸ್ವಾತಂತ್ರ್ಯವು ಇಲ್ಲವೆಂದಾದರೆ ಅವರು ತಮ್ಮ ನೋವನ್ನು ಎಲ್ಲಿ ಹೇಳಿಕೊಳ್ಳಬೇಕು? ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುವುದು ಎಷ್ಟು ಸೂಕ್ತ ಎಂದು ಸರ್ಕಾರವನ್ನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಡಿ. ಎನ್. ಜೀವರಾಜ್: ಆ ಪತ್ರಿಕಾಗೋಷ್ಠಿಯಲ್ಲಿ ಏನು ಹೇಳಿದ್ದಾರೆಂಬುದು ಮುಖ್ಯ.

ಅಧ್ಯಕ್ಷರು: ಮಂತ್ರಿಗಳು ಉತ್ತರ ಹೇಳಲಿ